ಆ. ಸಮಿತಿ ಸಭೆಯಲ್ಲಿ ಅರ್ಹ ಫಲಾಪೇಕ್ಷಿಗಳನ್ನು ಸರ್ಕಾರದ ಆದೇಶ ಸಂ:ಸಕಇ 82 ಎಸ್‌ಎಡಿ 95 ದಿ: 3-1-96ರಲ್ಲಿ ನಮೂದಿಸಲಾದ ಮಾನದಂಡಗಳ ರೀತ್ಯ ಆಯ್ಕೆ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಹಾಗೂ ಕೊಳವೆಬಾವಿಗಳನ್ನು ಕೊರೆಯಲಾಗಿದೆ.

ಇ. ಸರ್ಕಾರದ ಗಮನಕ್ಕೆ ಯಾವುದೇ ನಿರ್ದಿಷ್ಟವಾದ ಪ್ರಕರಣ ಬಂದಿರುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆಗೆ ಸಮಾಜ ಕಲ್ಯಾಣ ಇಲಾಖಾವತಿಯಿಂದ ಮಂಜೂರಾದ ಹಣ

405(464) ಶ್ರೀ ಮಹಾಲಿಂಗಪ್ಪ ಬಿ.ಎನ್ (ಶಿಕಾರಿಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಶಿವಮೊಗ್ಗ ಜಿಲ್ಲೆಗೆ ಸಮಾಜಕಲ್ಯಾಣ ಇಲಾಖೆಯಿಂದ ಮಂಜೂರಾದ ಹಣ ಎಷ್ಟು?

ಆ. ಮಂಜೂರಾದ ಹಣ ಖರ್ಚಾಗಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಸಮಾಜ ಕಲ್ಯಾಣ ಇಲಾಖೆಯಿಂದ ಶಿವಮೊಗ್ಗ ಜಿಲ್ಲೆಗೆ 2001-02ನೇ ಸಾಲಿಗೆ ಮಂಜೂರಾದ ಹಣ ಕೆಳಕಂಡಂತಿದೆ.

	ಇಲಾಖೆ	(ರೂ.ಲಕ್ಷಗಳಲ್ಲಿ)
1.	ಸಮಾಜ ಕಲ್ಯಾಣ ಇಲಾಖೆ.	720.69
2.	ಹಿಂದುಳಿದ ವರ್ಗಗಳ ಇಲಾಖೆ	449.05
3.	ಅಲ್ಪಸಂಖ್ಯಾತರ ಇಲಾಖೆ	13.20
4.	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	124.01

ಆ. ಪೂರ್ತಿ ಹಣ ಖರ್ಚಾಗಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಹಿಂದುಳಿದ ಅಲ್ಪಸಂಖ್ಯಾತರಿಗೆ ಗಂಗಾ ಕಲ್ಯಾಣ ಯೋಜನೆ

406(468) ಶ್ರೀ ನಾರಾಯಣ ಸ್ವಾಮಿ.ಎ (ಆನೇಕಲ್): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಹಿಂದುಳಿದ ಅಲ್ಪಸಂಖ್ಯಾತರ ವರ್ಗಕ್ಕಾಗಿ ವೈಯಕ್ತಿಕ ಗಂಗಾ ಕಲ್ಯಾಣ ಯೋಜನೆಯಡಿ ಕೆಳವೆ ಬಾವಿ ಕೊರೆಸುವ ಯೋಜನೆ ಇದೆಯೇ?

ಆ. ಇದ್ದಲ್ಲಿ ಜಿಲ್ಲಾವಾರು ಫಲಾನುಭವಿಗಳ ವಿವರ ಒದಗಿಸುವುದು?

ಇ. ಈ ಬೆಂಗಳೂರು ನಗರ ಜಿಲ್ಲೆಯಲ್ಲಿ ಸದರಿ ಯೋಜನೆ ಜಾರಿಯಾಗದಿರಲು ಹಾಗೂ ವಿಳಂಬಕ್ಕೆ ಕಾರಣಗಳೇನು?